KAHS200010132023

Presented on : 11-09-2023
Registered on : 11-09-2023
Decided on : 01-12-2023
Duration : 2 months 20 days

## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಲೂರು, ಹಾಸನ.

**ದಿನಾಂಕಃ 01 ನೇ ಡಿಸಂಬರ್ ಮಾಹೆಯ 2023 ರಂದು**

**ಉಪಸ್ಥಿತರುಃ**

**ಶ್ರೀಮತಿ ನಿರ್ಮಲ ಎಂ.ಸಿ,** ಬಿ.ಕಾಂ.ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಆಲೂರು, ಹಾಸನ.

**Crl.Misc./184/2023**

**ಅರ್ಜಿದಾರರು** ಃ

1. ರವೀಂದ್ರ ವಿ. ಬಿನ್ ಲೇಟ್ ವೆಂಕಟೇಗೌಡ,
ಸುಮಾರು 58 ವರ್ಷ ವಯಸ್ಸು,
2. ಮಲೇಶ್ ಗೌಡ ಬಿನ್ ಲೇಟ್ ವೆಂಕಟೇಗೌಡ,
ಸುಮಾರು 59 ವರ್ಷ ವಯಸ್ಸು,
3. ಚಂದ್ರೇಗೌಡ ಎಸ್.ವಿ. ಬಿನ್ ಲೇಟ್ ವೆಂಕಟೇಗೌಡ,
ಸುಮಾರು 56 ವರ್ಷ ವಯಸ್ಸು,
4. ಪ್ರಮೀಳ ಬಿನ್ ಲೇಟ್ ವೆಂಕಟೇಗೌಡ,
ಸುಮಾರು 50 ವರ್ಷ ವಯಸ್ಸು,
5. ಗೋವಿಂದೇಗೌಡ ಬಿನ್ ಲೇಟ್ ವೆಂಕಟೇಗೌಡ,
ಸುಮಾರು 49 ವರ್ಷ ವಯಸ್ಸು,
6. ವೇಣುಗೋಪಾಲ ಬಿನ್ ಲೇಟ್ ವೆಂಕಟೇಗೌಡ,
ಸುಮಾರು 47 ವರ್ಷ ವಯಸ್ಸು,
7. ಪ್ರಭಾಮಣಿ ಬಿನ್ ಲೇಟ್ ಕೃಷ್ಣೇಗೌಡ,
ಸುಮಾರು 58 ವರ್ಷ ವಯಸ್ಸು,

8. ಮೋಹನಾಕ್ಷಿ ಬಿನ್ ಲೇಟ್ ಕೃಷ್ಣೇಗೌಡ,
ಸುಮಾರು 56 ವರ್ಷ ವಯಸ್ಸು,

9. ಮಂಜುಳ ಬಿನ್ ಲೇಟ್ ಕೃಷ್ಣೇಗೌಡ,
ಸುಮಾರು 54 ವರ್ಷ ವಯಸ್ಸು,

10. ಚನ್ನಮ್ಮ ಕೋಂ ಲೇಟ್ ಕೃಷ್ಣೇಗೌಡ,
ಸುಮಾರು 75 ವರ್ಷ ವಯಸ್ಸು,

1 ರಿಂದ 10 ನೇ ಅರ್ಜಿದಾರರು ವಾಸಃ ಸುಳಗೋಡು ಗ್ರಾಮ, ಕುಂದೂರು ಹೋಬಳಿ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

**(ಪರಃ ಶ್ರೀ ಕೆ.ಜಿ.ಎನ್., ವಕೀಲರು)**

- ವಿರುದ್ದ -

**ಎದುರುದಾರರು** : ತಹಸೀಲ್ದಾರರು
ಜನನ ಮತ್ತು ಮರಣ ನೊಂದಣಾಧಿಕಾರಿಗಳು,
ತಾಲ್ಲೂಕು ಕಛೇರಿ, ಆಲೂರು ತಾಲ್ಲೂಕು,
ಹಾಸನ ಜಿಲ್ಲೆ.

**(ಏಕಪಕ್ಷೀಯ)**

## ಆ ದೇ ಶ

ಅರ್ಜಿದಾರರು ಅರ್ಜಿಯನ್ನು ಜನನ-ಮರಣ ಅಧಿನಿಯಮ 1969 ಕಲಂ 13(3)ರಡಿಯಲ್ಲಿ ದಾಖಲಿಸಿ 1 ರಿಂದ 9 ನೇ ಅರ್ಜಿದಾರರ ಅಜ್ಜಿ, 10 ನೇ ಅರ್ಜಿದಾರರ ಅತ್ತೆಯಾದ ಪುಟ್ಟಮ್ಮ ಕೋಂ ಕೃಷ್ಣೇಗೌಡ, ಇವರು ದಿಃ04.03.1983 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸುಳಗೋಡು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರ ಮನೆಯವರು ಅವಿದ್ಯಾವಂತರಾಗಿದ್ದು ಸದರಿಯವರ ಮರಣ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ತಿಳಿಸಿ ನೊಂದಾವಣೆ ಮಾಡಿಸಿರುವುದಿಲ್ಲ. ಅರ್ಜಿದಾರರು ಜಮೀನಿನ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಹಾಗೂ ಇತರೆ ಸೌಲಭ್ಯಗಳಿಗಾಗಿ ಸದರಿಯವರ ಮರಣ ದೃಢೀಕರಣ ಪತ್ರವು ಅವಶ್ಯಕವಾಗಿರುತ್ತದೆ. ಅರ್ಜಿದಾರರು ಸದರಿಯವರ ಮರಣ ದೃಢೀಕರಣ ಪತ್ರವನ್ನು ಪಡೆಯುವ ಸಲುವಾಗಿ ಎದುರುದಾರರ ಕಛೇರಿಯಲ್ಲಿ ಸದರಿಯವರ ಮರಣಕ್ಕೆ ಸಂಬಂಧಿಸಿದ ಮರಣ ದೃಢೀಕರಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸದರಿ ಪುಟ್ಟಮ್ಮ

ಕೋಂ ಕೃಷ್ಣೇಗೌಡ, ಇವರು ದಿಃ04.03.1983 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸುಳಗೋಡು ಗ್ರಾಮದಲ್ಲಿ ಮರಣ ಹೊಂದಿರುವ ಬಗ್ಗೆ ಜನನ ಮತ್ತು ಮರಣ ನೊಂದಾವಣೆಯನ್ನು ಪರಿಶೀಲಿಸಿ ಸದರಿ ಜನನ-ಮರಣ ನೊಂದಣಿ ವಹಿಯಲ್ಲಿ ನೊಂದಣಿಯಾಗಿಲ್ಲ ಎಂದು ತಿಳಿಸಿ ದಿಃ24.08.2023 ರಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಆದುದರಿಂದ, ಎದುರುದಾರರು ಜನನ ಮತ್ತು ಮರಣ ನೋಂದಣಿ ವಹಿಯಲ್ಲಿ ನೋಂದಣಿ ಮಾಡಿಕೊಂಡು ಮೃತರ ಮರಣ ದೃಢೀಕರಣ ಪತ್ರವನ್ನು ಅರ್ಜಿದಾರರಿಗೆ ನೀಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ನಂತರ ಅರ್ಜಿದಾರರ ಪರ ವಕೀಲರು ಪ್ರಜೋದಯ ದಿನ ಪತ್ರಿಕೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಪ್ರಕಟಣೆಯನ್ನು ನೀಡಿದರೂ ಸಹಾ ಯಾವುದೇ ವ್ಯಕ್ತಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿರುವುದಿಲ್ಲ.

3. ತದನಂತರ ಅರ್ಜಿದಾರರು ಅರ್ಜಿಯಲ್ಲಿ ಹೇಳಿದ ವಿಚಾರಗಳನ್ನು ರುಜುವಾತುಪಡಿಸುವ ನಿಟ್ಟಿನಲ್ಲಿ 1 ನೇ ಅರ್ಜಿದಾರರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿ, ಅಲಭ್ಯ ಪ್ರಮಾಣ ಪತ್ರವನ್ನು ನಿಪಿ.1 ರಂತೆ, ವಂಶವೃಕ್ಷವನ್ನು ನಿಪಿ.2 ರಂತೆ, ಪತ್ರಿಕಾ ಪ್ರಕಟಣೆಯನ್ನು ನಿಪಿ.3 ರಂತೆ, ನೋಟರೀಕೃತ ಆಧಾರ್ ಕಾರ್ಡನ್ನು ನಿಪಿ.4 ರಂತೆ ಹಾಜರುಪಡಿಸಿ ಗುರುತಿಸಿಕೊಂಡು ತಮ್ಮ ಪರ ಸಾಕ್ಷ್ಯವನ್ನು ಅಂತ್ಯಗೊಳಿಸಿಕೊಂಡಿರುತ್ತಾರೆ. ಆದ್ದರಿಂದ ಅರ್ಜಿದಾರರ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

4. ವಾದವನ್ನು ಆಲಿಸಲಾಯಿತು.

5. ಅರ್ಜಿಯಲ್ಲಿ ಹೇಳಿದ ವಿಚಾರಗಳನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಗಣಿಸಿದಾಗ ಈ ಕೆಳಕಂಡ ಅಂಶಗಳು ಪರಿಗಣನೆಗೆ ಬರುತ್ತದೆಃ

1. ಅರ್ಜಿದಾರರು ಈ ಅರ್ಜಿಯಲ್ಲಿ ಕೇಳಿದಂತೆ ನಿರ್ದೇಶನಾತ್ಮಕ ಆದೇಶವನ್ನು ನೀಡಲು ಸೂಕ್ತವಾದಂತಹ ಸಕಾರಣಗಳನ್ನು ರುಜುವಾತುಗೊಳಿಸಿರುತ್ತಾರೆಯೇ?

2. ಯಾವ ಆದೇಶ?

6. ಈ ಮೇಲಿನ ಅಂಶಗಳಿಗೆ ಈ ಮುಂದೆ ಹೇಳಿದ ಕಾರಣಗಳನ್ನು ನೀಡಿ ಈ ಕೆಳಗಿನಂತೆ ಉತ್ತರಿಸಲಾಯಿತು.

**ಒಂದನೇ ಪರಿಗಣನಾಂಶಃ** ಸಕಾರಾತ್ಮಕವಾಗಿ
**ಎರಡನೇ ಪರಿಗಣನಾಂಶಃ** ಅಂತಿಮ ಆದೇಶದಂತೆಃ

**ಕಾ ರ ಣ ಗ ಳು**

7. **ಒಂದನೇ ಪರಿಗಣನಾಂಶಃ** ಅರ್ಜಿದಾರರು ಈ ಮೊದಲೇ ಹೇಳಿದಂತೆ ಪ್ರಸ್ತುತ ಅರ್ಜಿಯನ್ನು ಎದುರುದಾರರಿಗೆ 1 ನೇ ಅರ್ಜಿದಾರರ ಅಜ್ಜಿಯಾದ ಪುಟ್ಟಮ್ಮ ಕೋಂ ಕೃಷ್ಣೇಗೌಡ, ಇವರ ಮರಣದ ದಿನಾಂಕವನ್ನು ಸಂಬಂಧಪಟ್ಟ ಮರಣ ನೊಂದಣಿ ವಹಿಯಲ್ಲಿ ನಮೂದಿಸುವಂತೆ ಕೋರಿರುತ್ತಾರೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಿದಂತಹ ವಿಚಾರಗಳನ್ನು ಪುರಾವೆಗೊಳಿಸುವ ನಿಟ್ಟಿನಲ್ಲಿ 1 ನೇ ಅರ್ಜಿದಾರರು ನ್ಯಾಯಾಲಯದ ಮುಂದೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮುಖೇನ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ಅಜ್ಜಿಯಾದ ಪುಟ್ಟಮ್ಮ ಕೋಂ ಕೃಷ್ಣೇಗೌಡ, ಇವರು ದಿಃ04.03.1983 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸುಳಗೋಡು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರ ಮನೆಯವರು ಅವಿದ್ಯಾವಂತರಾಗಿದ್ದು ಸದರಿಯವರ ಮರಣ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ತಿಳಿಸಿ ನೊಂದಾವಣೆ ಮಾಡಿಸಿರುವುದಿಲ್ಲ, ಅರ್ಜಿದಾರರು ಜಮೀನಿನ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಹಾಗೂ ಇತರೆ ಸೌಲಭ್ಯಗಳಿಗಾಗಿ ಸದರಿಯವರ ಮರಣ ದೃಢೀಕರಣ ಪತ್ರವು ಅವಶ್ಯಕವಾಗಿರುತ್ತದೆ. ಅರ್ಜಿದಾರರು ಸದರಿಯವರ ಮರಣ ದೃಢೀಕರಣ ಪತ್ರವನ್ನು ಪಡೆಯುವ ಸಲುವಾಗಿ ಎದುರುದಾರರ ಕಛೇರಿಯಲ್ಲಿ ಸದರಿಯವರ

ಮರಣಕ್ಕೆ ಸಂಬಂಧಿಸಿದ ಮರಣ ದೃಢೀಕರಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸದರಿ ಪುಟ್ಟಮ್ಮ ಕೋಂ ಕೃಷ್ಣೇಗೌಡ, ಇವರು ದಿಃ04.03.1983 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸುಳಗೋಡು ಗ್ರಾಮದಲ್ಲಿ ಮರಣ ಹೊಂದಿರುವ ಬಗ್ಗೆ ಜನನ-ಮರಣ ನೊಂದಣಿ ವಹಿಯಲ್ಲಿ ನೊಂದಣಿಯಾಗಿಲ್ಲ ಎಂದು ತಿಳಿಸಿ ದಿನಾಂಕಃ24.08.2023 ರಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೆ ಅವರ ಸಾಕ್ಷ್ಯಕ್ಕೆ ಪೂರಕವಾಗಿ ಎದುರುದಾರರು ನೀಡಿದ ಹಿಂಬರಹ ಹಾಗೂ ಪತ್ರಿಕಾ ಪ್ರಕಟಣೆಯನ್ನೂ ಸಹಾ ಈ ನ್ಯಾಯಾಲಯದ ಸಮ್ಮುಖ ಹಾಜರುಪಡಿಸಿರುತ್ತಾರೆ. ನಿಪಿ.1 ನ್ನು ಪರಿಗಣಿಸಿದಾಗ 1 ನೇ ಅರ್ಜಿದಾರರ ಅಜ್ಜಿಯಾದ ಪುಟ್ಟಮ್ಮ ಕೋಂ ಕೃಷ್ಣೇಗೌಡ, ಇವರ ಮರಣದ ದಿನಾಂಕವು ನೊಂದಣಿಯಾಗದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅರ್ಜಿದಾರರು ಇದರ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ನೀಡಿದರೂ ಸಹ ಯಾವುದೇ ವ್ಯಕ್ತಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು ಅರ್ಜಿದಾರರ ಸಾಕ್ಷ್ಯವನ್ನು ಅಲ್ಲಗಳೆಯುವ ಯಾವುದೇ ಸಂಗತಿಗಳು ನ್ಯಾಯಾಲಯದ ಮುಂದೆ ಇಲ್ಲದಿರುವ ಕಾರಣ ಅರ್ಜಿದಾರರ ಸಾಕ್ಷ್ಯವನ್ನು ನಂಬದಿರಲು ಯಾವುದೇ ಸಕಾರಣಗಳು ಕಂಡುಬರುವುದಿಲ್ಲ, ಆದ್ದರಿಂದ ನ್ಯಾಯಾಲಯವು ಅರ್ಜಿದಾರರು ಹಾಜರುಪಡಿಸಿರುವ ಲಿಖಿತ ಹಾಗೂ ಮೌಖಿಕ ಸಾಕ್ಷ್ಯವನ್ನು ಪರಿಗಣಿಸಿ, ಅರ್ಜಿದಾರರು ತಾವು ತಮ್ಮ ಅರ್ಜಿಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರಿರುವುದಾಗಿ ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ ಮತ್ತು ಸದರಿ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.

8. **ಎರಡನೇ ಪರಿಗಣನಾಂಶಃ** ಈ ಮೊದಲು ಒಂದನೇ ಪರಿಗಣನಾಂಶದಲ್ಲಿ ವಿವರಿಸಿದ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸಿ, ಎರಡನೇ ಪರಿಗಣನಾಂಶವನ್ನು ಉತ್ತರಿಸಲಾಯಿತು.

**ಃ ಆ ದೇ ಶ ಃ**

ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿದೆ.

ಪುಟ್ಟಮ್ಮ ಕೋಂ ಕೃಷ್ಣೇಗೌಡ, ಇವರು ದಿಃ04.03.1983 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸುಳಗೋಡು ಗ್ರಾಮದಲ್ಲಿ

ಮರಣ ಹೊಂದಿರುವುದಾಗಿ ಎದುರುದಾರರು ಸಂಬಂಧಿಸಿದ ನೊಂದಣಿ ವಹಿಯಲ್ಲಿ ಸದರಿಯವರ ಮರಣ ದಿನಾಂಕವನ್ನು ನಮೂದಿಸುವುದು ಮತ್ತು ಅದಕ್ಕೆ ತಗಲುವ ಶುಲ್ಕವನ್ನು ಅರ್ಜಿದಾರರಿಂದ ಭರಿಸಿಕೊಳ್ಳತಕ್ಕದ್ದು.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉತ್ತಲೇಖನ ನೀಡಿ ಬೆರಳಚ್ಚು ಮಾಡಿದ್ದನ್ನು ಓದಿ, ಪರಿಶೀಲಿಸಿ ತಿದ್ದುಪಡಿ ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 01 ನೇ ಡಿಸಂಬರ್ ಮಾಹೆಯ 2023 ರಂದು ಉಚ್ಚರಿಸಲಾಯಿತು)

**(ಶ್ರೀಮತಿ ನಿರ್ಮಲ ಎಂ.ಸಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಆಲೂರು.

**: ಅನುಸೂಚಿ :**

**ಅರ್ಜಿದಾರರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:**

ಪಿಡಬ್ಲ್ಯೂ. 1 : ರವೀಂದ್ರ ವಿ.

**ಅರ್ಜಿದಾರರ ಪರ ಗುರುತಿಸಿಕೊಂಡ ದಾಖಲೆಗಳು:**

ನಿಶಾನೆ ಪಿ 1 : ಅಲಭ್ಯ ಪ್ರಮಾಣ ಪತ್ರ

ನಿಶಾನೆ ಪಿ 2 : ವಂಶವೃಕ್ಷ

ನಿಶಾನೆ ಪಿ 3 : ಪತ್ರಿಕಾ ಪ್ರಕಟಣೆ

ನಿಶಾನೆ ಪಿ 4 : ನೋಟರೀಕೃತ ಆಧಾರ್ ಕಾರ್ಡ್

**ಎದುರುದಾರರ ಪರ ವಿಚಾರಣೆಯಾದ ಸಾಕ್ಷಿಗಳು ಮತ್ತು ದಾಖಲೆಗಳು:-**

– ಇಲ್ಲ -

ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಆಲೂರು.